**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸ್ವ ಉದ್ಯೋಗ ಕಾರ್ಯಕ್ರಮಗಳ ಶಾಖೆಯಲ್ಲಿ ನಿರ್ವಹಿಸಲಾಗುತ್ತಿರುವ ಕಾರ್ಯಕ್ರಮಗಳಲ್ಲಿ**

1) **ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ:**

ಈ ಯೋಜನೆಯಡಿ ಸ್ವಯಂ ಉದ್ಯೋಗ ನಿರ್ವಹಿಸುವ ಅಂಗವಿಕಲರಿಗೆ ಬ್ಯಾಂಕಿನಿಂದ ಸಾಲ ಮತ್ತು ಜಿಲ್ಲಾ ಪಂಚಾಯತಿಯಿಂದ ಸಹಾಯಧನ ಗರಿಷ್ಠ 7500.00 ರೂ.ಗಳನ್ನು ನೀಡಲು ಮತ್ತು 5 ಅಂಗವಿಕಲರು ಸೇರಿ ಸ್ವ ಸಹಾಯ ಸಂಘ ರಚನೆ ಮಾಡಿದರೆ ಬ್ಯಾಂಕಿನಿಂದ ಸಾಲ ಮತ್ತು ಶೇ.50ರಷ್ಟು ಯೋಜನಾ ವರದಿಯಂತೆ ಗರಿಷ್ಠ ರೂ.1.25 ಲಕ್ಷ ಸಹಾಯಧನ ನೀಡಲಾಗುವುದು. ಅಂಗವಿಕಲರಿಗೆ ಈ ಯೋಜನೆಯಲ್ಲಿ ಆಯ್ಕೆಯಾದ ಕೌಶಲ್ಯ ತರಬೇತಿಯನ್ನು ಜಿಲ್ಲೆಯಲ್ಲಿರುವ ರೂಡ್‌ಸೆಟಿ ಮತ್ತು ಪ್ರತಿಷ್ಠಿತ NGO ಮೂಲಕ ಉಚಿತವಾಗಿ ನೀಡಲಾಗುವುದು. ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

2) **ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ:**

ಈ ಯೋಜನೆಯು ಉದ್ಯೋಗ ನೀಡಿಕೆ ಕಾರ್ಯಕ್ರಮವಾಗಿದ್ದು, ಅಂಗವಿಕಲ ಪೋಷಕರ ಮಕ್ಕಳಿಗೆ ಅಥವಾ ಅಂಗವಿಕಲ ಮಕ್ಕಳ ಪೋಷಕರಿಗೆ ದಿನಗೂಲಿ ಆಧಾರದ ಮೇಲೆ ಉದ್ಯೋಗ ನೀಡುವಲ್ಲಿ ಆದ್ಯತೆ ನೀಡ ಲಾಗುವುದು.

3) **ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:**

ಈ ಯೋಜನೆಯು ಉದ್ಯೋಗ ನೀಡಿಕೆ ಕಾರ್ಯಕ್ರಮವಾಗಿದ್ದು , ಅಂಗವಿಕಲರಿಗೆ ಆದ್ಯತೆ ಮೇರೆಗೆ ಉದ್ಯೋಗ ನೀಡಲಾಗುವುದು ಮತ್ತು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳು ಕಂಪ್ಯೂಟರ್ ತರಬೇತಿ ಹೊಂದಿದ ವ್ಯಕ್ತಿಗಳನ್ನು ಗುತ್ತಿಗೆಯ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವಾಗ ಅಂಗವಿಕಲರಿಗೆ ಆದ್ಯತೆ ನೀಡಲಾಗುವುದು.

ಸಹಿ:

ನಿರ್ದೇಶಕರು(ಸ್ವಉಕಾ)

ಗ್ರಾಅಪಂರಾಜ್ ಇಲಾಖೆ

Document in Microsoft Internet Explorer